# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 120 | Pages. 2 | Date: 12-03-2025, WEDNESDAY    RNI NO: KARKAN/2024/89601

ಸಂಪುಟ : 01 - ಸಂಚಿಕೆ : 120 - ಪುಟಗಳು : 2 - 12 ಮಾರ್ಚ್ 2025 ಬುಧವಾರ    Ph: 8762954248    ದರ : ₹1


# ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕದ ಹೆಸರಿಲ್ಲ

## ಮಾಜಿ ಸಚಿವ ರೇವಣ್ಣಗೆ ಸಂಸದರ ತಿರುಗೇಟು | ಅಭಿವೃದ್ಧಿಗೆ ಸಹಕರಿಸಲು ಮನವಿ

ಹಾಸನ: ರಾಜ್ಯ ಬಜೆಟ್‌ನಲ್ಲಿ ಜಿಲ್ಲೆಯ ಹೆಸರಿಲ್ಲ ಎನ್ನುವವರು ಕೇಂದ್ರ ಬಜೆಟ್ ನಲ್ಲಿ ಕರ್ನಾಟಕದ ಹೆಸರಿಲ್ಲ ಎಂಬುದನ್ನು ಅರಿಯಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರಿಗೆ ತಿರುಗೇಟು ನೀಡಿದರು.

ರಾಜ್ಯ ಬಜೆಟ್‌ನಲ್ಲಿ ಜಿಲ್ಲೆಯನ್ನು ಕಡೆಗಣಿಸಲಾಗಿದೆ ಎಂಬ ಆರೋಪಕ್ಕೆ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, ಆಯವ್ಯಯ ಪ್ರತಿಯನ್ನು

ಓದಿ ನಂತರ ಮಾತನಾಡಬೇಕು. ಬಜೆಟ್ ಹೇಗೇ ಇದ್ದರೂ, ಪ್ರತಿಪಕ್ಷಗಳು ಟೀಕೆ ಮಾಡುತ್ತವೆಯೇ ಹೊರತು, ಹೊಗಳುವುದಿಲ್ಲ. ಅವರೂ ಅದೇ ಕೆಲಸ ಮಾಡಿದ್ದಾರೆ. ಟೀಕೆ-ಟಿಪ್ಪಣಿ ಮಾಡುವ ಮುನ್ನ ತಿಳಿದು ಮಾತನಾಡಲಿ ಎಂದು ಕುಟುಕಿದರು.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸದ್ಯ 9 ಕೋಟಿ ರೂ. ನೀಡಲಾಗಿದೆ. ಆಸ್ಪತ್ರೆ ಆರಂಭಕ್ಕೆ ಬೇಕಾದ ಉಪಕರಣ ಖರೀದಿಗೆ 30 ಕೋಟಿ ರೂ. ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅದಕ್ಕೆ ಅನುಮೋದನೆ ಸಿಕ್ಕಿದೆ ಎಂದರು.

ಬೇಲೂರು-ಹಾಸನ ರೈಲ್ವೆ ಯೋಜನೆಗೆ ತನ್ನ ಪಾಲಿನ ಶೇ. 50ಅನುದಾನ ನೀಡಲು ಒಪ್ಪಿಗೆ ಸೂಚಿಸಲಾಗಿದೆ. ಬೇಲೂರು-ಹಳೇಬೀಡು ದೇವಾಲಯ ವ್ಯಾಪ್ತಿಯಲ್ಲಿ



ಪ್ರವಾಸಿಗರಿಗೆ ಮೂಲ ಸೌಕರ್ಯಕ್ಕೆ ಹಣ ನಿಗದಿ ಪಡಿಸಲಾಗಿದೆ. ಹಾಸನ ನಗರಸಭೆಯನ್ನು ನಗರಪಾಲಿಕೆಯಾಗಿ ಮೇಲ್ದರ್ಜೆಗೇರಿಸಿರುವುದು ಕಾಂಗ್ರೆಸ್ ಸರ್ಕಾರ. ಬಜೆಟ್‌ನಲ್ಲಿ ಅದಕ್ಕೆ ಅನುದಾನವನ್ನೂ ನೀಡಿದೆ ಎಂದರು ತಿಳಿಸಿದರು.

ಚನ್ನರಾಯಪಟ್ಟಣದ ದಿಡಗ ಕೆರೆ ತುಂಬಿಸಲು ಹಾಗೂ ತೋಟಿ ಏತ ನೀರಾವರಿ ಸಾಕಾರಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ. ಕೆಶಿಪ್ ಅಡಿಯಲ್ಲಿ ಶ್ರೀರಂಗಪಟ್ಟಣ, ಕೆ.ಆರ್.ಪೇಟೆ ಮತ್ತು ಚನ್ನರಾಯಪಟ್ಟಣ ಹಾಗೂ ಸಕಲೇಶಪುರದ ದೋಣಿಗಾಲ್, ಮಡಿಕೇರಿ ನಡುವಿನ ರಸ್ತೆ ಅಭಿವದ್ಧಿಗೆ ಹಣ ನೀಡಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಆನೆ ದಾಳಿಯಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಮೊತ್ತವನ್ನು 15 ರಿಂದ 20 ಲಕ್ಷ ರೂ.ಗೆ ಹೆಚ್ಚಿಸಿದೆ. ಭದ್ರಾ ಅರಣ್ಯ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಎಲಿಫೆಂಟ್ ಸಾಫ್ಟ್ ರಿಲೀಫ್ ಸೆಂಟರ್‌ಗೆ ಪ್ರಾಥಮಿಕವಾಗಿ 17 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಶೇ. 90 ರಷ್ಟು ಬೇಡಿಕೆಗೆ ಸರ್ಕಾರ ಸ್ಪಂದಿಸಿದೆ ಎಂದರು.

ನೂತನ ಜಿಲ್ಲಾಧಿಕಾರಿ ಕಚೇರಿ ಕಟ್ಟಡ ಕಾಮಗಾರಿ ಶೇ.40 ರಷ್ಟು ಬಾಕಿ ಇದ್ದು, ಒಂದೂವರೆ ವರ್ಷದಲ್ಲಿ ಕಾಮಗಾರಿ ಮುಗಿಸಲಾಗುವುದು, ತಾಲ್ಲೂಕು ಕಚೇರಿ ಕಟ್ಟಡ ಕಾಮಗಾರಿ 2 ತಿಂಗಳಲ್ಲಿ ಮುಗಿಯಲಿದೆ ಎಂದರು.

ಜಿಲ್ಲಾಡಳಿತದ ಅಧಿಕಾರಿಗಳೂ ಉತ್ತಮ ಕೆಲಸ ಮಾಡುತ್ತಿದ್ದು ಪೋಡಿ ವಿಲೇವಾರಿಯಲ್ಲಿ

> ಬೂವನಹಳ್ಳಿಯಲ್ಲಿ ನಡೆಯುತ್ತಿರುವ ವಿಮಾನ ನಿಲ್ದಾಣ ಕಾಮಗಾರಿಗೆ ಹಣದ ಕೊರತೆ ಇಲ್ಲ. ಮುಂದುವರಿದ ಕಾಮಗಾರಿಗೆ 50 ಕೋಟಿ ರೂ. ಬಿಡುಗಡೆಗೆ ಪತ್ರ ಬರೆಯಲಾಗಿದೆ. ಮುಂದಿನ ಬಜೆಟ್‌ನಲ್ಲಿ ಶೇ.100ರಷ್ಟು ಪ್ರಯತ್ನ ಹಾಕಿ ಹಣ ಬಿಡುಗಡೆ ಮಾಡಿಸಲಾಗುವುದು.
>
> -ಶ್ರೇಯಸ್ ಪಟೇಲ್, ಸಂಸದ

14,896 ಪ್ರಕರಣ ಇತ್ಯರ್ಥಪಡಿಸಲಾಗಿದೆ. ರಾಜ್ಯದಲ್ಲಿ ಹಾಸನ ಪ್ರಥಮ ಪ್ರಥಮ ಸ್ಥಾನದಲ್ಲಿದೆ ಎಂದರು.

ಆಧಾರ ರಹಿತ ಆರೋಪ ಬೇಡ: ಪೊಲೀಸ್ ಇಲಾಖೆಯೂ ಸಹ ನಾಗರಿಕರ ಹಿತ ಕಾಯುವುದು, ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಉತ್ತಮ ಕೆಲಸ ಮಾಡುತ್ತಿದೆ. ಪೊಲೀಸರು ದಿನವೂ 7 ಗಂಟೆ ಎಣ್ಣೆ ಹೊಡೆಯುತ್ತಾರೆ ಎಂದು ಇಲ್ಲ ಸಲ್ಲದ ಆರೋಪ ಮಾಡುವುದು ಸರಿಯಲ್ಲ. ಪುರಾವೆ ಇದ್ದರೆ ಕೊಡಲಿ, ತನಿಖೆ ಮಾಡಿ ಕ್ರಮ ಜರುಗಿಸೋಣ, ಇವರ ಕಾಲದಲ್ಲಿ ಏನೆಲ್ಲಾ ನಡೆದಿದೆ ಎಂಬುದು ಜನರಿಗೆ ಗೊತ್ತಿದೆ ಎಂದು ಟಾಂಗ್ ನೀಡಿದರು.

ಜಿಲ್ಲೆಯಲ್ಲಿ ಗಾಂಜಾ, ಡ್ರಗ್ಸ್ ದಂಧೆ ತಡೆ ವಿಚಾರದಲ್ಲಿ ನಾನು ರಾಜಿಯಾಗುವುದಿಲ್ಲ.

ಅವರು ಹಿರಿಯರಿದ್ದಾರೆ. ಅಭಿವೃದ್ಧಿಗೆ ಸಲಹೆ ಕೊಡಲಿ, ಚುನಾವಣೆ ಬಂದಾಗ ರಾಜಕೀಯ ಮಾಡೋಣ, ಬಜೆಟ್‌ನಲ್ಲಿ ಹಾಸನದ ಹೆಸರಿಲ್ಲ ಎನ್ನುವವರು ಕೇಂದ್ರ ಬಜೆಟ್ ಪ್ರತಿಯಲ್ಲಿ ಕರ್ನಾಟಕದ ಹೆಸರಿಲ್ಲ ಅನ್ನೋದನ್ನೂ ಸರಿಯಾಗಿ ಓದಿ ಮಾತನಾಡಲಿ ಎಂದರು.

ಹಾಸನಾಂಬ ಉತ್ಸವದ ಬಗ್ಗೆ ಪೂರ್ವಭಾವಿ ಸಭೆ ನಡೆದಿದೆ. ಕಳೆದ ಬಾರಿಯ ಲೋಪ ದೋಷ ಸರಿಪಡಿಸಲು ಈಗಿನಿಂದಲೇ ಕ್ರಮ ವಹಿಸಲಾಗುವುದು. ಪಾಸ್ ರದ್ದು ಮಾಡುವಂತೆ ನಾನೇ ಮನವಿ ಮಾಡಿದ್ದೇ ಎಂದು ಪ್ರಶ್ನೆಗೆ ಉತ್ತರಿಸಿದರು.

140 ಶಾಸಕರನ್ನು ಹೊಂದಿರುವ ನಮ್ಮ ಸರ್ಕಾರ ಸುಭದ್ರವಾಗಿದೆ. ಸರ್ಕಾರ ಪತನವಾಗುತ್ತದೆ ಎಂಬುದು ಭ್ರಮೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣ್, ವಕ್ತಾರ ದೇವರಾಜೇಗೌಡ, ಯೂತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು ಹಾಗೂ ಬ್ಲಾಕ್ ಕಾಂಗ್ರೆಸ್ ಚಂದ್ರಶೇಖರ ಇದ್ದರು.

# ಪ್ರತ್ಯೇಕ ಅಪಘಾತ: ನಾಲ್ವರ ಸಾವು, ಇಬ್ಬರಿಗೆ ಗಾಯ

ಹಾಸನ: ಜಿಲ್ಲೆಯ ವಿವಿಧೆಡೆ ನಡೆದ ಪ್ರತ್ಯೇಕ ಅಪಘಾತಗಳಲ್ಲಿ ನಾಲ್ವರು ಮೃತಪಟ್ಟು ಇಬ್ಬರು ಗಂಭೀರ ಗಾಯಗೊಂಡಿದ್ದಾರೆ.

ಬೈಕ್ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ಅರಕಲಗೂಡು-ರಾಮನಾಥಪುರ ರಸ್ತೆಯ ಪೆಟ್ರೋಲ್ ಬಂಕ್ ಸಮೀಪ ನಡೆದಿದೆ. ದೊಡ್ಡಮಗ್ಗೆ ಹೋಬಳಿ ನಿಲುವಾಗಿಲು ಗ್ರಾಮದ ಗುರುದತ್ ರಾಜೇ ಅರಸ್ (27) ಮೃತರು. ಮಾ. 4 ರಂದು ತಂಬಾಕು ಮಂಡಳಿಯಿಂದ ಊರಿಗೆ ಹೋಗಲು ರಸ್ತೆಯ ಎಡಬದಿ ಹೋಗುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಬೈಕ್ ಡಿಕ್ಕಿಯಾಗಿ ಗುರುದತ್ ಗಂಭೀರ ಗಾಯಗೊಂಡಿದ್ದರು. ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದ್ದಾದರೂ ಸ್ಪಂದಿಸದೆ ಸೋಮವಾರ ಮೃತಪಟ್ಟಿದ್ದಾರೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾದಚಾರಿ ಸಾವು: ನಿರ್ಲಕ್ಷ್ಯದ ಚಾಲನೆಯಿಂದ ಬೈಕ್ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ಬೇಲೂರು ಜಾವಗಲ್ ಪಟ್ಟಣದಲ್ಲಿ ನಡೆದಿದೆ.

ಹಳೇಬೀಡು ಹೋಬಳಿ ಹಿರೇಹಳ್ಳಿ ಗ್ರಾಮದ ಪುಟ್ಟಸ್ವಾಮಿ (50) ಮೃತರು. ಪುಷ್ಪಗಿರಿ ಬೆಟ್ಟಕ್ಕೆ ಪಾದಯಾತ್ರೆ ಬಂದಿದ್ದ ಅವರು ವಾಪಾಸ್ ಹೋಗುತ್ತಿದ್ದಾಗ ಜಾವಗಲ್‌ನ ಎಟಿಎಂ ರಸ್ತೆ ಮುಂಭಾಗ ವೇಗವಾಗಿ ಬಂದ ಬೈಕ್ ಡಿಕ್ಕಿಯಾಗಿದೆ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಕಲೇಶಪುರ ತಾಲ್ಲೂಕು ಮೊಗೆನಹಳ್ಳಿ ಸಮೀಪ ಸಿಮೆಂಟ್ ಕಾಂಕ್ರಿಟ್ ತುಂಬಿಕೊಂಡು ಹೋಗುತ್ತಿದ್ದ ಲಾರಿ ಮಗುಚಿ ಇಬ್ಬರು ಮೃತಪಟ್ಟು ಮತ್ತಿಬ್ಬರು ಗಂಭೀರ ಗಾಯಗೊಂಡಿದ್ದಾರೆ.

ಪಶ್ಚಿಮ ಬಂಗಾಳ ಮೂಲದ ಆಲಿಂಗರ್ ಸರ್ದಾರ್ ಹಾಗೂ ಸಲಿಂ ಮಲಿತ್ಯ ಮೃತರು. ಸೂರಜ್ ಮುಂಡಲ್, ರುಬೆಲ್ ಮುಂಡಲ್ ಗಾಯಾಳುಗಳು. ಹಾಸನದ ಕೈಗಾರಿಕಾ ಪ್ರದೇಶದಲ್ಲಿರುವ ಇನ್ಫ್ರಾ ಮಾರ್ಕೆಟ್ ಸಿಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿಕೊಂಡಿದ್ದ ಕಾರ್ಮಿಕರು ಸಕಲೇಶಪುರ ತಾಲ್ಲೂಕು ಕಾಗಿನರೆ ಸಮೀಪ ನಿರ್ಮಾಣ ಹಂತದ ರೆಸಾರ್ಟ್‌ಗೆ ಲಾರಿಯಲ್ಲಿ ಕಾಂಕ್ರಿಟ್ ತುಂಬಿಕೊಂಡು ಹೋಗುತ್ತಿದ್ದರು. ಚಾಲಕ ಸೊಹಿಲ್ ಮುಂಡಲ್ ಅತಿವೇಗವಾಗಿ ವಾಹನ ಓಡಿಸಿದ್ದರಿಂದ ಮೊಗೆನಹಳ್ಳಿ ಹತ್ತಿರ ಲಾರಿ ನಿಯಂತ್ರಣ ತಪ್ಪಿ ಬಲಭಾಗದ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿ ಹಳ್ಳಕ್ಕೆ ಪಲ್ಟಿಯಾಗಿದೆ. ಗಾಯಾಳುಗಳನ್ನು ಹಿಮ್ಸ್‌ಗೆ ದಾಖಲಿಸಲಾಗಿದೆ. ಸಕಲೇಶಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶಸಾಪ ಕಾರ್ಯವ್ಯಾಪ್ತಿ ವಿಸ್ತರಿಸಲಿ

ಹಾಸನ: ಪ್ರಸ್ತುತ ಸಮಾಜಕ್ಕೆ ವಚನ ಸಾಹಿತ್ಯದ ಅರಿವು ಹೆಚ್ಚಬೇಕಿದ್ದು ಆ ನಿಟ್ಟಿನಲ್ಲಿ ಶರಣ ಸಾಹಿತ್ಯ ಪರಿಷತ್ ತನ್ನ ವ್ಯಾಪ್ತಿ ವಿಸ್ತರಿಸಿಕೊಳ್ಳಬೇಕು ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ. ಸಿ. ಸೋಮಶೇಖರ್ ಹೇಳಿದರು.

ತಣ್ಣೀರುಹಳ್ಳ ಮಠದ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ಶರಣ ಸಾಹಿತ್ಯ ಪರಿಷತ್‌ನಿಂದ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿ, ಶರಣ ಸಾಹಿತ್ಯ ಪರಿಷತ್ ನಿಂದ ಶಾಲಾ-ಕಾಲೇಜಿನಲ್ಲಿ ಕಾರ್ಯಕ್ರಮ ನಡೆಸಲು ಸರ್ಕಾರದ ಆದೇಶವಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಮತ್ತು ಹೋಬಳಿ ಅಧ್ಯಕ್ಷರು ಕಾರ್ಯ ಪ್ರವೃತ್ತರಾಗಬೇಕಿದೆ. ಮಕ್ಕಳಿಗೆ ವಚನ ಸಾಹಿತ್ಯದ ಅರಿವು ಮತ್ತು ಮಹತ್ವ ತಿಳಿಸುವ ಉದ್ದೇಶದಿಂದ ಮಕ್ಕಳ ಶರಣ ಸಾಹಿತ್ಯ ಸಮ್ಮೇಳನ ಹಾಗೂ ಯುವ ಶರಣ ಸಮ್ಮೇಳನ ನಡೆಸಲಾಗುತ್ತಿದೆ ಎಂದರು.



ಸುತ್ತೂರು ಮಠದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಜನ್ಮ ದಿನದ ಅಂಗವಾಗಿ 1986 ರಲ್ಲಿ ಶರಣ ಸಾಹಿತ್ಯ ಪರಿಷತ್ ಸ್ಥಾಪಿಸಲಾಗಿದೆ. ಅಂದಿನಿಂದ ರಾಜ್ಯಾದ್ಯಂತ ಸಕ್ರಿಯಾಗಿ ಕೆಲಸ ಮಾಡಲಾಗುತ್ತಿದೆ. ಯಾವ ಜಾತಿ, ಧರ್ಮ, ವರ್ಗಕ್ಕೆ ಸೀಮಿತವಾಗದ ಶರಣ ಸಾಹಿತ್ಯ ಪರಿಷತ್ತಿನಲ್ಲಿ ಪ್ರತಿಯೊಬ್ಬರು ಕೂಡ ಎಲ್ಲರೂ ಸದಸ್ಯತ್ವ ಪಡೆಯಬಹುದು. ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಸದಸ್ಯತ್ವ ಹೆಚ್ಚಿಸಬೇಕು ಎಂದು ಹೇಳಿದರು.

12ನೇ ಶತಮಾನದಲ್ಲಿ ಜನ್ಮ ತಾಳಿದ ಶರಣ ಧರ್ಮ ಜಗತ್ತಿನಲ್ಲಿ ತನ್ನದೇಯಾದ ಖ್ಯಾತಿ ಪಡೆದಿದೆ. ವಿಶ್ವಗುರು ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ ಪ್ರಭು, ಸಿದ್ದರಾಮರು ಸೇರಿ ಹಲವು ವಚನಕಾರರು ಕನ್ನಡ ಸಾಹಿತ್ಯ ಲೋಕಕ್ಕೆ ಅಪರೂಪ ಕೊಡುಗೆ ನೀಡಿದ್ದಾರೆ. ಅಮೂಲ್ಯ ವಚನ ಸಾಹಿತ್ಯವನ್ನು ಶರಣ ಸಾಹಿತ್ಯ ಪರಿಷತ್ತು ಘಟಕಗಳು ದುರುದ್ದೇಶವಿಲ್ಲದೆ ಜನರಿಗೆ ತಲುಪಿಸಬೇಕಿದೆ ಎಂದರು.

ಅಖಿಲ ಭಾರತ ಶರಣ ಸಾಹಿತ್ಯಪರಿಷತ್ ಕೇಂದ್ರ ಪ್ರಧಾನ ಕಾರ್ಯದರ್ಶಿ ಸೋಮಶೇಖರ್ ಗಾಂಜಿ, ಕದಳಿ ಮಹಿಳಾ ವೇದಿಕೆ ರಾಜ್ಯ ಸಂಚಾಲಕಿ ಸುಶೀಲ ಸೋಮಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಟ್ಟಾಯ ಶಿವಕುಮಾರ್, ಖಜಾಂಚಿ ರುದ್ರಸ್ವಾಮಿ, ಉಪಾಧ್ಯಕ್ಷ ನಂಜುಂಡಸ್ವಾಮಿ, ಯುವ ಘಟಕದ ಅಧ್ಯಕ್ಷ ಕುಮಾರ್, ತಾಲ್ಲೂಕು ಘಟಕ ಅಧ್ಯಕ್ಷರಾದ ಹೆಬ್ಬಾಳು ಹಾಲಪ್ಪ, ಪುಟ್ಟರಾಜು, ವಿಜಯಕುಮಾರ್, ಶೇಖರ್, ಚಿರಂಜೀವಿ, ಕೌಡಹಳ್ಳಿ ಲೋಹಿತ್, ನಾಗೇಶ್, ಪುನೀತ್ ಪಟೇಲ್, ಶಾರದ ಗುರುಮೂರ್ತಿ, ಮೀನಾಕ್ಷಿ ಖಾದರ್, ಸಿ.ಎಂ. ನಿಂಗರಾಜ್ ಹಾಜರಿದ್ದರು.

# ಶ್ರೀ ಶಂಭುನಾಥ ಸ್ವಾಮೀಜಿ ವರ್ಧಂತ್ಯುತ್ಸವ

## ಹಾಸನ ಮಠದಲ್ಲಿ ಅರ್ಥಪೂರ್ಣ ಕಾರ್ಯಕ್ರಮ | ನೂರಾರು ಜನರು ಭಾಗಿ

ಹಾಸನ: ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರ 46ನೇ ವರ್ಧಂತ್ಯುತ್ಸವವನ್ನು ಮಠದ ಸದ್ಭಕ್ತರು ಹಾಗೂ ಸ್ವಾಮೀಜಿಯವರ ಅಭಿಮಾನಿಗಳು ಸಂಭ್ರಮದಿಂದ ಆಚರಿಸಿದರು.

ಸೋಮವಾರ ಬೆಳಗ್ಗೆಯಿಂದಲೇ ಶ್ರೀ ಮಠದ ಆವರಣದಲ್ಲಿ ನೂರಾರು ಭಕ್ತರ ಸಮ್ಮುಖದಲ್ಲಿ ಮಹಾಗಣಪತಿ ದೇವಸ್ಥಾನ ಹಾಗೂ ಯಾಗ ಮಂಟಪದಲ್ಲಿ ವಿಶೇಷ ಹೋಮ, ಷೋಡಶೋಪಚಾರ ಪೂಜಾ ಕಾರ್ಯಕ್ರಮ ಜರುಗಿದವು. ಸಂಜೆ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಭಕ್ತರು ಕೇಕ್ ಕತ್ತರಿಸಿ ಸ್ವಾಮೀಜಿಯವರಿಗೆ ಶುಭ ಹಾರೈಸಿದರು.

ವೇದಿಕೆ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ. ಎಚ್.ಎಲ್. ಮಲ್ಲೇಶಗೌಡ, ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾಗಿದ್ದ ಭೈರವೈಕ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಆದರ್ಶಗಳನ್ನು ಸಮಾಜಕ್ಕೆ ಬಿತ್ತುತ್ತ ನೊಂದವರಿಗೆ ನೆರಳಾಗಿ ಮುನ್ನಡೆಯುತ್ತಿರುವ ಶಂಭುನಾಥ ಶ್ರೀಗಳು ಇತರರಿಗೆ ಮಾದರಿ ಎಂದರು.

ಬಾಲಗಂಗಾಧರನಾಥ ಸ್ವಾಮೀಜಿಯವರು ಶ್ರೀ ರಾಮನಾದರೆ, ಶಂಭುನಾಥ ಶ್ರೀ ಹನುಮಂತ ಎಂದು ಗುಣಗಾನ ಮಾಡಿದ ಅವರು, ಹಾಸನ ಹಾಗೂ ಕೊಡಗು ಮಠದ ನೇತೃತ್ವ ವಹಿಸಿಕೊಂಡ ಮೇಲೆ ಈ ಭಾಗದಲ್ಲಿ ಸಮುದಾಯವನ್ನು ಒಗ್ಗೂಡಿಸುವುದರ ಜೊತೆಗೆ ಮಠವನ್ನು ಬೆಳೆಸಿಕೊಂಡು ಹೋಗುತ್ತಿದ್ದಾರೆ. ಮಿತ ಭಾಷಿಯಾಗಿ, ಹಸನ್ಮುಖಿಯಾಗಿ ಭಕ್ತ ಗಣಕ್ಕೆ ಸನ್ಮಾರ್ಗ ತೋರುತ್ತಿದ್ದಾರೆ ಎಂದು ತಿಳಿಸಿದರು.



ಶಂಭುನಾಥ ಸ್ವಾಮೀಜಿ ಅವರ ನೇತೃತ್ವದಲ್ಲಿ ನಡೆಯುವ ಗುರು ತೋರಿದ ತಿಂಗಳ ಮಾಮನ ತೇರು ಕೇವಲ ಹೆಸರಲ್ಲ. ಅದು ಧಾರ್ಮಿಕ ಕೈಂಕರ್ಯಗಳಲ್ಲಿ ಎಲ್ಲರನ್ನೂ ಕರೆದೊಯ್ಯುವ ವಿಶೇಷ ಕಾರ್ಯಕ್ರಮ.ಯಾವ ಕ್ಷಣಕ್ಕೂ ನಾವು ನಂಬಿದ ಗುರು ಕೈ ಬಿಡಲ್ಲ ಎಂಬ ವಿಶ್ವಾಸದಲ್ಲಿ ಕೆಲಸ ಮಾಡುತ್ತಾರೆ. ಹೂ ಎತ್ತಿದಷ್ಟೇ ಸರಳವಾಗಿ ಎಲ್ಲಾ ಕೆಲಸ ಇವರ ನೇತೃತ್ವದಲ್ಲಿ ಆಗುತ್ತದೆ. ಅಂತಹ ಶ್ರದ್ಧೆ, ಭಕ್ತಿಯನ್ನು ಇಟ್ಟುಕೊಂಡು ಸುಮಾರು 36 ಶಿಕ್ಷಣ ಸಂಸ್ಥೆಗಳನ್ನು ತಮ್ಮ ಮಾರ್ಗದರ್ಶನದಲ್ಲಿ ಮುಂದುವರೆಸುತ್ತಿದ್ದು, ಶಿಕ್ಷಣ ಸಂಸ್ಥೆಗಳನ್ನು ಬೆಳೆಸುತ್ತಿರುವ ಮಾದರಿ ಮೆಚ್ಚುವಂತಹುದು ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ದಸರಿಘಟ್ಟದ ಚಂದ್ರಶೇಖರ ನಾಥ ಸ್ವಾಮೀಜಿ, ಕಬ್ಬಳಿ ಮಠದ ಶಿವಪುತ್ರ ನಾಥ ಸ್ವಾಮೀಜಿ, ಬಸವೇಶ್ವರ ಚೈತನ್ಯ ಸ್ವಾಮೀಜಿ, ರುದ್ರಮುನಿ ಶ್ರೀ, ಶಿರದನಹಳ್ಳಿ ಮಠದ ಸದಾಶಿವ ಸ್ವಾಮೀಜಿ, ತುಳಸಿಗೆರೆ ರಮಾನಂದನಾಥ ಸ್ವಾಮೀಜಿ, ಶ್ರೀ, ಕೈಲಾಸನಂದನಾಥ ಸ್ವಾಮೀಜಿ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್. ಮುದ್ದೇಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘು ಗೌಡ, ಹುಣ್ಣಿಮೆ ಕಾರ್ಯಕ್ರಮದ ಸಂಚಾಲಕ ಎಚ್.ಬಿ ಮದನಗೌಡ, ಹರಿಹರಪುರ ಶ್ರೀಧರ್, ಹೆಚ್.ಎಂ. ಸುರೇಶಕುಮಾರ್, ಚ.ನ. ಅಶೋಕ್, ಹೆಚ್.ಟಿ. ಕಿರಣ್, ಜಯದೇವ, ಜೆ.ಆರ್. ಕೆಂಚೇಗೌಡ, ಸತೀಶ್ ಕುಮಾರ್, ಬಿಜಿಎಸ್ ಸಹಕಾರ ಸಂಘದ ಅಧ್ಯಕ್ಷ ಮಧುಸೂದನ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಗಂಗಾಧರ್ ಮತ್ತಿತರರಿದ್ದರು.

# ಕಾರ್ತಿಕ್ ಪಬ್ಲಿಕ್ ಶಾಲೆಯಲ್ಲಿ ರಾಮಾಯಣ ದೃಶ್ಯ ಪ್ರದರ್ಶನ

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಗ್ರಾಮದ ಕಾರ್ತಿಕ್ ಪಬ್ಲಿಕ್ ಶಾಲೆಯಲ್ಲಿ ಬೆಂಕಿ ರಹಿತ ಆಹಾರ ಪದಾರ್ಥ ತಯಾರಿಕಾ ಸ್ಪರ್ಧೆ, ವಿಜ್ಞಾನ ವಸ್ತು ಪ್ರದರ್ಶನ ಹಾಗೂ ರಾಮಾಯಣ ನಾಟಕ ದೃಶ್ಯ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು.



ಸಮಾರಂಭ ಉದ್ಘಾಟಿಸಿದ ಶಾಲೆಯ ಅಧ್ಯಕ್ಷ ಅನಂತ ಕೃಷ್ಣಮೂರ್ತಿ ಮಾತನಾಡಿ, ಬೆಂಕಿ ಬಳಸದೆ ಸಿದ್ಧಪಡಿಸಿದ ಆಹಾರ ಪದಾರ್ಥಗಳ ಸೇವನೆಯು ಆರೋಗ್ಯಕ್ಕೆ ಸಹಾಯಕ. ಶೈಕ್ಷಣಿಕ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ವ್ಯವಹಾರ ಜ್ಞಾನ ಕಲಿಸುವುದು ಅಗತ್ಯವಿದೆ. ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಲು ಜ್ಞಾನ ಹಾಗೂ ಧ್ಯಾನ ಅಗತ್ಯವಿದ್ದು ಮೌಲ್ಯಯುತ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಕಲಿಸಬೇಕು ಎಂದರು.

ಮುಂದಿನ ಭವಿಷ್ಯಕ್ಕೆ ಶಿಕ್ಷಣದ ಕಲಿಕೆ ಅಗತ್ಯವಿದ್ದು ಶೈಕ್ಷಣಿಕ ಹಂತದಲ್ಲಿ ಟೀವಿ ವೀಕ್ಷಣೆ ಹಾಗೂ ಮೊಬೈಲ್ ಬಳಕೆಯಿಂದ ಮಕ್ಕಳನ್ನು ದೂರವಿರಿಸುವುದು ಪಾಲಕರ ಕರ್ತವ್ಯ. ಅದರಿಂದ ಮಕ್ಕಳನ್ನು ಸಮಾಜದ ಆಸ್ತಿಯಾಗಿ ರೂಪಿಸಬಹುದು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ರಾಮಾಯಣದ ದೃಶಾವಳಿಗಳನ್ನು ಹಂತ ಹಂತವಾಗಿ ಪ್ರದರ್ಶನ ಮಾಡಿದ ಪರಿ ನೋಡುಗರ ಗಮನ ಸೆಳೆಯಿತು. ಶಿಕ್ಷಕ ಎಚ್.ಎನ್. ಅಣ್ಣಯ್ಯ ಸಹ ಶಿಕ್ಷಕರ ನೆರವಿನೊಂದಿಗೆ ನಿರ್ದೇಶನ ಮಾಡಿದ್ದ ನಾಟಕದಲ್ಲಿ ಶ್ರೀ ರಾಮನ ಜನ್ಮ, ಸೀತಾರಾಮ ಕಲ್ಯಾಣ, ವನವಾಸ, ಅಪಹರಣ, ರಾಮ-ರಾವಣರ ಯುದ್ಧ, ಸೀತೆಯ ಅಗ್ನಿ ಪರೀಕ್ಷೆ, ಲವಕುಶರ ಜನನ ಹಾಗೂ ರಾಮ-ಲವ ಕುಶರ ಯುದ್ಧದ ದೃಶ್ಯಾವಳಿಗಳನ್ನು ನೋಡುಗರಿಗೆ ಅರ್ಥವಾಗುವ ಹಾಗೆ ಅಭಿನಯಿಸಿದರು.

ಬೆಂಕಿ ರಹಿತ ಅಡಿಗೆ ತಯಾರಿಕೆ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ಪಾಲ್ಗೊಂಡಿದ್ದರು. ಹೆಸರು ಕಾಳು, ಬೇಳೆ ಹಾಗೂ ವಿವಿಧ ಮೊಳಕೆ ಕಾಳುಗಳಿಂದ ಕೊಸಂಬರಿ, ಹಣ್ಣುಗಳು, ರಸಾಯನ ತಯಾರಿಸಿದ್ದು ಪ್ರದರ್ಶನದ ಜತೆಗೆ ಮಾರಾಟ ಮಾಡಿದರು.

ಹಿರೀಸಾವೆ ನಯನ ಕುಮಾರಿ, ಪತ್ರಕರ್ತರಾದ ಹಿ.ಕೃ. ಚಂದ್ರು ಹಾಗೂ ಆರ್. ಶ್ರೀನಿವಾಸ್ ಉಳ್ಳಾವಳ್ಳಿ ತೀರ್ಪುಗಾರರಾಗಿ ಕರ್ತವ್ಯ ನಿರ್ವಹಿಸಿದರು. ಕಾರ್ಯದರ್ಶಿ ರೇಣುಕಾದೇವಿ, ಮುಖ್ಯಶಿಕ್ಷಕ ಬಿ.ಸಿ.ಚೇತನ್ ಕುಮಾರ್ ಮತ್ತಿತರರಿದ್ದರು.

# ಚುನಾವಣಾ ವ್ಯವಸ್ಥೆ ಬಲಪಡಿಸಲು ಸಲಹೆ ಆಹ್ವಾನ

ಬೆಂಗಳೂರು: ಚುನಾವಣೆ ಪ್ರಕ್ರಿಯೆ ಬಲಪಡಿಸುವ ಉದ್ದೇಶದಿಂದ ರಾಜಕೀಯ ಪಕ್ಷಗಳ ಅಧ್ಯಕ್ಷರು ಹಾಗು ನಾಯಕರೊಂದಿಗೆ ಸಭೆ ನಡೆಸಬೇಕು. ದೇಶಾದ್ಯಂತ ಚುನಾವಣೆಗ ಳನ್ನು ಪಾರದರ್ಶಕವಾಗಿ ಮುನ್ನೆಡಸಬೇಕು ಎಂದು ಕೇಂದ್ರ ಚುನಾವಣಾ ಆಯೋಗ ಚುನಾವಣಾಧಿಕಾರಿಗಳಿಗೆ ನಿರ್ದೇಶನ ನೀಡಿದೆ.


ತಾಲ್ಲೂಕು, ಜಿಲ್ಲಾ ಅಥವಾ ರಾಜ್ಯ ಮಟ್ಟದ ಮುಖ್ಯ ಚುನಾವಣಾಧಿಕಾರಿಗಳು ಬಗೆಹರಿಸಲಾಗದ ಸಮಸ್ಯೆಗಳಿಗೆ ಸಂಬಂಧಿಸಿ ಎಲ್ಲಾ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳ ಸಲಹೆಗಳನ್ನು ಕ್ರೂಢೀಕರಿಸಿ 2025ರ ಏ. 30ರ ಒಳಗೆ ಕೇಂದ್ರ ಚುನಾವಣಾ ಆಯೋಗಕ್ಕೆ ಸಲ್ಲಿಸಲು ಸೂಚಿಸಿದೆ.

ಕೇಂದ್ರ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಇತ್ತೀಚೆಗೆ ನಡೆದ ಸಭೆಯಲ್ಲಿ ಮುಖ್ಯ ಚುನಾವಣಾಧಿಕಾರಿ, ಜಿಲ್ಲಾ ಚುನಾವಣಾಧಿಕಾರಿ ಮತ್ತು ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಚುನಾವಣಾ ನೋಂದಣಾಧಿಕಾರಿಗಳು, ರಾಜಕೀಯ ಪಕ್ಷಗಳೊಂದಿಗೆ ನಿಯಮಿತವಾಗಿ ಸಂವಹನ ನಡೆಸಲು ಹೇಳಿದ್ದರು. ಆ ಸಭೆಗಳಲ್ಲಿ ಪಡೆದ ಸಲಹೆಗಳನ್ನು ಕಾನೂನು ಚೌಕಟ್ಟಿನೊಳಗೆ ಪರಿಹರಿಸಿ ಮಾ. 31ರ ಒಳಗೆ ತೆಗೆದುಕೊಂಡ ವರದಿಯನ್ನು ಆಯೋಗಕ್ಕೆ ಸಲ್ಲಿಸಲು ತಿಳಿಸಲಾಗಿತ್ತು. ಅಲ್ಲದೆ ಚುನಾವಣಾ ಆಯೋಗದ ವಿನೂತನ ಕಾರ್ಯಕ್ಕೆ ರಾಜಕೀಯ ಪಕ್ಷಗಳು ಕೈಜೋಡಿಸುವ ಮೂಲಕ ಪ್ರಜಾಪ್ರಭುತ್ವವನ್ನು ಬಲಿಷ್ಠಗೊಳಿಸಲು ಒತ್ತಾಯಿಸಲಾಗಿತ್ತು.

# ಜೆಡಿಎಸ್ ತೆಕ್ಕೆಗೆ ಕಲ್ಕೆರೆ ಪಿಕೆಪಿಎಸ್

ಚನ್ನರಾಯಪಟ್ಟಣ: ತಾಲ್ಲೂಕಿನ ಕಲ್ಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಕೆ.ಎನ್. ಅಶೋಕ್ ಹಾಗೂ ಉಪಾಧ್ಯಕ್ಷರಾಗಿ ಕೆ.ಟಿ. ಪ್ರಭಾಕರ್ ಆಯ್ಕೆಯಾಗಿದ್ದು ಜೆಡಿಎಸ್ ವಶವಾಗಿದೆ.

ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಅಭಿನಂದಿಸಿದ ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಕಲ್ಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲಸ ಮಾಡುತ್ತದೆ. ತಾವು ಜಿಲ್ಲಾ ಸಹಕಾರ ಬ್ಯಾಂಕ್‌ನ ನಿರ್ದೇಶಕರಾಗಿ ತಾಲ್ಲೂಕಿನ ಎಲ್ಲಾ ಕೃಷಿ ಪತ್ತಿನ ಸಹಕಾರ ಸಂಘಗಳಿಗೂ ಸಹಕಾರ ನೀಡಿದ್ದೇನೆ ಎಂದರು. ಅಧ್ಯಕ್ಷಸ್ಥಾನಕ್ಕೆ ಕೆ.ಎನ್. ಅಶೋಕ್, ಕಾಂಗ್ರೆಸ್ ಬೆಂಬಲದಿಂದ ಮರಿಗೌಡ ಮಧು, ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಕೆ.ಟಿ.ಪ್ರಭಾಕರ್ ಮತ್ತು ಕಾಂಗ್ರೆಸ್‌ನಿಂದ ಶಾರದಮ್ಮ ಸ್ಪರ್ಧಿಸಿದ್ದರು. ಸಾಲಗಾರರ ಕ್ಷೇತ್ರದಿಂದ 11, ಸಾಲಗಾರರಲ್ಲದ ಕ್ಷೇತ್ರದಿಂದ 1 ಮತ್ತು ನಾಮನಿರ್ದೇಶಿತ 1 ಸೇರಿ 13 ಮತಗಳಿವೆ. ಕೆ.ಎನ್.



ಅಶೋಕ್ 7 ಮತ ಪಡೆದರೆ ಮರಿಗೌಡ ಮಧು 6 ಮತ ಪಡೆದರು. ಕೆ.ಟಿ. ಪ್ರಭಾಕರ್ ಸಹ 7 ಮತ ಪಡೆದು ಜಯಭೇರಿ ಬಾರಿಸಿದರು. ಚುನಾವಣಾ ಅಧಿಕಾರಿಯಾಗಿ ವಾಸಿಂ ಷರೀಫ್ ಕಾರ್ಯ ನಿರ್ವಹಿಸಿದರು. ಸಂಘದ ನಿರ್ದೇಶಕರಾದ ಡಿ.ಎಸ್. ಸುರೇಶ್, ಕೆ.ಎಸ್. ದೇವರಾಜ್, ಸುಧಾ ಹರೀಶ್, ಪುಷ್ಪ ರಮೇಶ್, ಡಿ.ಎನ್. ಮಂಜುನಾಥ್, ಬಸವರಾಜ್, ರಾಜಮ್ಮ, ಡಿ.ಆರ್. ಧನಂಜಯ್, ಮಾಜಿ ಅಧ್ಯಕ್ಷ ಶಿವಣ್ಣ, ಗೋಪಾಲ್ ಗೌಡ, ಧರ್ಮರಾಜ್, ಕುಂಬಾರಹಳ್ಳಿ ರಮೇಶ್ ಇತರರು ಇದ್ದರು.

# ಮಹದೇಶ್ವರ ಸ್ವಾಮಿ ಮಹೋತ್ಸವಕ್ಕೆ ಸಿದ್ಧತೆ

ಹಾರನಹಳ್ಳಿ: ಮಾ. 15 ರಿಂದ 17ರ ವರೆಗೆ ಕೋಡಿಮಠದಲ್ಲಿ ಶ್ರೀ ಮಹದೇಶ್ವರ ಸ್ವಾಮಿ ಮಹೋತ್ಸವ ನಡೆಯಲಿದ್ದು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.



ಮಾ. 15ರ ಶನಿವಾರ ಬೆಳಿಗ್ಗೆ ಜಂಗಮ ಮಹಾಪೂಜೆ, 55 ಜಂಗಮವರ್ಯರ ಗದ್ದುಗೆ ಪೂಜೆ, ಧ್ವಜಾರೋಹಣ, ಸಿಂಹಾಸನ ಪೂಜೆ, 11 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ. ಮಾ. 16ರ ಭಾನುವಾರ ಬೆಳಿಗ್ಗೆ 6.30ಕ್ಕೆ ವೇ. ನೀಲಕಂಠಯ್ಯ, ಶಿವಲಿಂಗಮೂರ್ತಿ ಅವರಿಂದ ಪುರಾಣ ಶ್ರವಣ, ಬೆಳಿಗ್ಗೆ 8 ಗಂಟೆಗೆ ಹಾರನಹಳ್ಳಿಯಲ್ಲಿ ಪಾದಪೂಜೆ ಹಮ್ಮಿಕೊಳ್ಳಲಾಗಿದೆ. ಮಾ. 17ರ ಸೋಮವಾರ ಬೆಳಿಗ್ಗೆ 6.30ಕ್ಕೆ ಶ್ರೀ ಶಿವಲಿಂಗ ಸ್ವಾಮೀಜಿ ಗದ್ದುಗೆಗೆ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ, ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಪಲ್ಲಕ್ಕಿ ಉತ್ಸವ, ಪುರ ಪ್ರವೇಶ ನಂತರ ಮಹದೇಶ್ವರ ಬೆಟ್ಟದಲ್ಲಿ ಗುಗ್ಗಳ ಸೇವೆ, ಹೆಜ್ಜೆ ನಮಸ್ಕಾರ, ಜಂಗಮ ಪೂಜೆ, ಮತ್ತಿತರೆ ಸೇವೆ ನಡೆಯಲಿದೆ. ಸಂಜೆ 6 ಗಂಟೆಗೆ ಧಾರ್ಮಿಕ ಸಭೆ ನಡೆಯಲಿದೆ.

ಶ್ರೀ ಮಠದ ಪೀಠಾಧ್ಯಕ್ಷ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ನಿಡಸೋಸಿ ಶ್ರೀ ಸಿದ್ಧಸಂಸ್ಥಾನ ಮಠದ ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಧಾರ್ಮಿಕ ಕೈಂಕರ್ಯಗಳು ನೆರವೇರಲಿವೆ.

# ಹಾಸನ: ಕುಡಿದ ಅಮಲಿನಲ್ಲಿ ಕಳವಿಗೆ ಯತ್ನ

ಹಾಸನ: ನಗರದ ಉತ್ತರ ಬಡಾವಣೆಯ ರಚನಾ ಅಕಾಡೆಮಿ ಅಂಡ್ ಸ್ಟುಡಿಯೋ ರೋಲಿಂಗ್ ಶೆಟರ್ ಮುರಿದು ಕಳ್ಳತನಕ್ಕೆ ವಿಫಲ ಯತ್ನ ನಡೆದಿದೆ.



ಕುಡಿದ ಅಮಲಿನಲ್ಲಿ ರೋಲಿಂಗ್ ಶೆಟರ್ ಮುರಿಯಲು ಯತ್ನಿಸಿರುವ 60 ವರ್ಷದ ವ್ಯಕ್ತಿ ಸಾಕಷ್ಟು ಪ್ರಯತ್ನಿಸಿದ್ದಾರೆ. ಎಷ್ಟೇ ಯತ್ನಿಸಿದರೂ ಶೆಟರ್ ಬೀಗ ಮುರಿಯದೆ ಇದ್ದುದರಿಂದ ಪಕ್ಕದಲ್ಲೇ ನಿಂತಿದ್ದ ಬೈಕ್ ಕದಿಯಲು ಯತ್ನಿಸಿದ್ದಾನೆ. ಅದು ಅನ್‌ಲಾಕ್ ಆಗಿದ್ದರಿಂದ ಪ್ರಯತ್ನ ವಿಫಲವಾಗಿ ಬಂದ ದಾರಿಯಲ್ಲಿ ಬರಿಗೈಯಲ್ಲಿ ವಾಪಸ್ಸಾಗಿದ್ದಾನೆ. ಈ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

# ರಾಗಿ ಖರೀದಿಗೆ ಚಾಲನೆ

ನುಗ್ಗೇಹಳ್ಳಿ: ಬೆಂಬಲ ಬೆಲೆ ಯೋಜನೆಯಡಿ ರೈತರಿಗೆ ಪ್ರತಿ ಕ್ವಿಂಟಲ್ ರಾಗಿಗೆ 4290 ರೂ. ಗಳನ್ನು ನಿಗದಿ ಮಾಡಿದ್ದು ನೋಂದಾವಣೆ ಮಾಡಿರುವ ರೈತರು ಗುಣಮಟ್ಟದ ರಾಗಿಯನ್ನು ಮಾರಾಟ ಮಾಡುವಂತೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದ ನಿರ್ದೇಶಕ ಸಿಎನ್ ಮಂಜುನಾಥ್ ತಿಳಿಸಿದರು.

ಹೋಬಳಿ ಕೇಂದ್ರದ ಎಪಿಎಂಸಿ ಆವರಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದ ವತಿಯಿಂದ ಏರ್ಪಡಿಸಿದ್ದ ಎಫ್ ಎ ಕ್ಯೂ ಗುಣಮಟ್ಟದ ರಾಗಿ ಖರೀದಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ರೈತರಿಂದ ಖರೀದಿಸುವ ರಾಗಿಯನ್ನು ಪುನಃ ಪಡಿತರದಾರರಿಗೆ ವಿತರಣೆ ಮಾಡುವುದರಿಂದ ರೈತರು ಗುಣಮಟ್ಟದ ರಾಗಿಯನ್ನು ಮಾರಾಟ ಮಾಡಬೇಕು. ಖರೀದಿ ಕೇಂದ್ರದಲ್ಲಿ ರೈತರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ ಕಳೆದ ವರ್ಷ ಏಕಕಾಲದಲ್ಲಿ ರಾಗಿ, ಕೊಬ್ಬರಿ ಖರೀದಿ ಮಾಡಿದ್ದರಿಂದ ಸಮಸ್ಯೆಯಾಗಿತ್ತು.

# ಸಮಾಜದ ಅನೇಕ ಪ್ರಶ್ನೆಗಳಿಗೆ ಲಂಕೇಶ್ ಉತ್ತರ: ದಿನೇಶ್




ಹಾಸನ: ಸಮಾಜದಲ್ಲಿ ನಡೆಯುವ ಕೆಲವು ಸಂಗತಿಗಳ ಕುರಿತು ಪ್ರಶ್ನೆ, ಗೊಂದಲ, ದುಗುಡಗಳಿಗೆ ಪರಿಹಾರ ಹುಡುಕುವಾಗ ಲಂಕೇಶ್ ಗುರುಗಳಾಗಿ ನಿಲ್ಲುತ್ತಾರೆ. ಜಡ್ಡುಗಟ್ಟಿದ್ದ ಪತ್ರಿಕೋದ್ಯಮಕ್ಕೆ ಜುಟ್ಟು ಹಿಡಿದು ಪ್ರಶ್ನಿಸುವ ಎಚ್ಚರಿಕೆ ಕಲಿಸಿದವರು ಎಂದು ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಜನಪರ ಸಂಘಟನೆಗಳ ಒಕ್ಕೂಟದಿಂದ ಇತ್ತೀಚೆಗೆ ಹಮ್ಮಿಕೊಂಡಿದ್ದ ಲಂಕೇಶ್-90 ಮಾತುಕತೆ-ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, , ಕೈ ತುಂಬಾ ಸಂಬಳ ಬರುವ ಕೆಲಸ ಬಿಟ್ಟು ಯಾರ ಹಂಗೂ ಇಲ್ಲದೆ ಜಾಹೀರಾತು ಪಡೆಯದೆ ಕೇವಲ ಓದುಗರ ಎದೆಯೊಳಗೆ ಪ್ರಜ್ಞೆ ಬಿತ್ತಿಯೇ ಪತ್ರಿಕಾರಂಗವನ್ನು ಕಟ್ಟಿಬೆಳೆಸುವುದು ಹುಡುಗಾಟದ ಮಾತಲ್ಲ.ಆ ಎದೆಗಾರಿಕೆ ಲಂಕೇಶರಿಗಲ್ಲದೆ ಬೇರೆಯವರಿಗೆ ಬರಲು ಸಾಧ್ಯವೇ ಎಲ್ಲ ಎಂದರು.

ಚಳುವಳಿಗಳು ಸೋತು-ಸೊರಗಿರುವ ಪ್ರಸ್ತುತ ದಿನಗಳಲ್ಲಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸೂಕ್ಷ್ಮಗಳಿಗೆ ಸ್ಪಂದಿಸಲು ಲಂಕೇಶ್ ಇರಬೇಕಿತ್ತು ಎಂದು ಎಲ್ಲರೂ ಬಯಸುತ್ತಾರೆ. 80ರ ದಶಕದಲ್ಲಿ ಲಂಕೇಶ್ ಪತ್ರಿಕೆ ಪ್ರಭಾವದಿಂದ ಚಳುವಳಿಗಳನ್ನು ಬೆಳೆಸಿತೋ ಅಥವಾ ಅಂದಿನ ದಲಿತ, ರೈತ ಮತ್ತು ಭಾಷಾ ಚಳುವಳಿಗಳು ಲಂಕೇಶ್ ಪತ್ರಿಕೆ ಬೆಳೆಸಿದೆವೋ ಎನ್ನುವುದು ಅನೇಕರಿಗೆ ಜಿಜ್ಞಾಸೆ ಇದೆ. ಲಂಕೇಶ್ ಅವರು ನನ್ನಿಂದಲೇ ಚಳುವಳಿ ಬೆಳೆಯಿತು ಎಂದು ಹೇಳಿಕೊಂಡಿದ್ದಾರೆ. ಆದರೆ ಆ ಸಂದರ್ಭದಲ್ಲಿ ಅವರು ಚಳುವಳಿಗಳ ಕುರಿತು ವಿರೋಧಾಭಾಸದ ನಿಲುವು ಹೊಂದಿದ್ದರು ಹಾಗೂ ಚಳವಳಿಗಳನ್ನು ಕುಗ್ಗಿಸುವಂತಹ ಬರಹಗಳನ್ನೂ ಕೂಡ ಬರೆಯುತ್ತಿದ್ದರು ಎಂದು ಹಲವಾರು ಉದಾಹರಣೆ ಮೂಲಕ ವಿವರಿಸಿದರು.

ಸಾಹಿತಿ ಕೇವಲ ಸೃಜನಶೀಲ ವಿವರಣೆಗಾರ, ಆದರೆ ಪತ್ರಕರ್ತ ಯುದ್ಧಭೂಮಿಯ ಹೋರಾಟಗಾರನಂತೆ, ಸಾಹಿತಿಯ ಬರಹ ಜನರಿಗೆ ನಾಟದಿದ್ದರೂ ಸಾಹಿತಿಗೆ ನಷ್ಟವಿಲ್ಲ, ಪತ್ರಕರ್ತನ ಬರಹ ಜನದನಿ ಆಗದಿದ್ದರೆ ಅದು ಅವರಿಗೆ ಅರ್ಥವಾಗದಿದ್ದರೆ ಅವನ ಅಸ್ತಿತ್ವವೇ ಹುದುಗಿ ಹೋಗುತ್ತದೆ. ಹಾಗಾಗಿ ಸಾಹಿತಿ-ಪತ್ರಕರ್ತನಾಗಿ ಲಂಕೇಶ್ ಅವರಿಗೆ ಆ ಸೃಜನಶೀಲತೆ ಜೊತೆಗೆ ಶ್ರೀಸಾಮಾನ್ಯನ ಪರಿಭಾಷೆ ಇತ್ತು. ಅವನ ಸಂವೇದನೆಗಳಿಗೆ ಗಟ್ಟಿದನಿಯಾಗುವ ಸಾಮರ್ಥ್ಯವಿತ್ತು.

ಆ ಕಾರಣಕ್ಕಾಗಿ ಕಾಂಗ್ರೆಸನ್ನು ಧೂಳೀಪಟ ಮಾಡಿ ಜನತಾಪಕ್ಷ ಅಧಿಕಾರಕ್ಕೆ ತರಲು ಪತ್ರಿಕೆ ಪಾತ್ರ ವಹಿಸಿತು. ಹಾಗೆಯೇ ರಾಮಕೃಷ್ಣ ಹೆಗಡೆಯವರ ಹಗರಣಗಳನ್ನ ಜನರ ಮುಂದೆ ಬಯಲು ಮಾಡಿ, ಅಧಿಕಾರ ಕಳೆದುಕೊಳ್ಳುವಂತೆ ಮಾಡುವಲ್ಲಿಯೂ ಲಂಕೇಶ್ ಪತ್ರಿಕೆ ಕೆಲಸ ಮಹತ್ತರವಾದುದು ಎಂದು ನುಡಿದರು.

ದೇವಸ್ಥಾನಕ್ಕೆ ಹೋಗಿ ಅಡ್ಡ ಬೀಳುವ ರಾಜಕಾರಣಿಗಳನ್ನು ಹಿಗ್ಗಾಮುಗ್ಗಾ ಅವರಂತೆ ಖಂಡಿಸುವ ಸಾಮರ್ಥ್ಯ ಯಾರಿಗೂ ಇಲ್ಲ. ಅಬ್ದುಲ್ ನಜೀರ್‌ಸಾಬ್ ಅವರನ್ನು ಹೊರತುಪಡಿಸಿ ಡಾ. ರಾಜಕುಮಾರ್ ಸೇರಿ ಲಂಕೇಶ್ ಅವರ ಟೀಕೆಗೆ ಗುರಿಯಾಗದ ರಾಜಕಾರಣಿ, ನಟ, ಹೋರಾಟಗಾರ, ಸಾಹಿತಿ ಇಲ್ಲವೇ ಇಲ್ಲ ಎಂದರು.

ಸಾಹಿತಿ ಬಾನು ಮುಷ್ತಾಕ್ ಮಾತನಾಡಿ, ಲಂಕೇಶರಿಗೆ ಪಾಳೇಗಾರಿಕೆ ಮನೋವೃತ್ತಿ ಎಷ್ಟಿತ್ತೋ,ಅಷ್ಟೇ ಪ್ರಮಾಣದ ತಾಯಿ ಹೃದಯ ಇತ್ತು. ಅವರೊಬ್ಬ ಉತ್ತಮ ಸಾಹಿತಿ, ಪತ್ರಕರ್ತ, ಸಿನಿಮಾ ತಯಾರಕ ಆದರೆ ಕೆಟ್ಟ ಭಾಷಣಕಾರ ಹಾಗೆಯೇ ರಾಜಕೀಯ ಪಕ್ಷ ಕಟ್ಟಲು ಹೋಗಿ ವಿಫಲತೆ ಕಂಡ ರಾಜಕಾರಣಿ ಎಂದರು.

ಉಪನ್ಯಾಸಕ ರೋಹಿತ್ ಅಗಸರಹಳ್ಳಿ ಮಾತನಾಡಿ, ನಮ್ಮ ಮುಂದಿನ ಪೀಳಿಗೆ ಸುಖಕರವಾಗಿ ಬದುಕಲು ಲಂಕೇಶ್ ಬೇಕು. ಅವರದು ರಾಕ್ಷಸ ಪ್ರತಿಭೆ, ಪತ್ರಿಕೋದ್ಯಮಕ್ಕೆ ವಸ್ತು ಸ್ಥಿತಿಯ ಎಚ್ಚರ ಕೊಟ್ಟವರು, ಸಾಹಿತ್ಯಕ್ಕೆ ಮಾನವ ಪ್ರಜ್ಞೆ ಕೊಟ್ಟವರು. ಅವರು ಇಸಂ ಮೀರಿ ಸಾಮಾಜಿಕ ನ್ಯಾಯಕ್ಕಾಗಿ ಒಂದು ನಿರ್ದಿಷ್ಟ ರೂಪು-ರೇಷೆ ಸಿದ್ದಪಡಿಸಿದವರು.

ಈಗಿನ ತಲ್ಲಣಗಳಿಗೆ ಸ್ಪಂದಿಸಲು ಗೊಂದಲ ಪಡುತ್ತಿರುವ ನಮಗೆ ಲಂಕೇಶರು ಎದುರುಗೊಳ್ಳುತ್ತಾರೆ, ನೆನಪಾಗುತ್ತಾರೆ. ಅವರಲ್ಲಿ ಸ್ಪಷ್ಟ ಮಾರ್ಗವಿದೆ, ಹಾಗಾಗಿ ಹೊಸಕಾಲದ ಮಕ್ಕಳಿಗೆ ಲಂಕೇಶರ ಪರಿಚಯ ಆಗಬೇಕು ಎಂದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ರೂಪ ಹಾಸನ, ಕನ್ನಡ ಸಾಹಿತ್ಯ ಪರಿಷತ್ ಕೋಶಾಧಿಕಾರಿ ಜಯರಾಂ, ಬಿಜಿವಿಎಸ್ ತಾಲ್ಲೂಕು ಸಮಿತಿ ಸದಸ್ಯೆ ವನಜಾಕ್ಷಿ ನಿರೂಪಿಸಿದರು. ಕಲಾವಿದ ಕುಮಾರ್ ಕಟ್ಟೆಬೆಳಗುಲಿ ಕುವೆಂಪು ಗೀತೆ ಹಾಡಿದರು. ಕವಯತ್ರಿ ಜ.ನಾ.ತೇಜಶ್ರೀ ಅವರು ಲಂಕೇಶ್ ಕವಿತೆ ವಾಚಿಸಿ ವಿವರಿಸಿದರು. ಬಿಜಿವಿಎಸ್‌ನ ಅಹಮದ್ ಹಗರೆ ಸ್ವಾಗತಿಸಿದರು. ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಹೆಚ್.ಆರ್. ನವೀನ್‌ಕುಮಾರ್ ವಂದಿಸಿದರು.

# ವಾಹನಗಳ ಎಲ್ಲಾ ದಾಖಲಾತಿ ಹೊಂದಿರಬೇಕು

## ಲೋಕ ಅದಾಲತ್‌ನಲ್ಲಿ ನ್ಯಾಯಾಧೀಶರ ಸಲಹೆ | ಅಪಘಾತ ಪ್ರಕರಣ ಇತ್ಯರ್ಥ



ಬೇಲೂರು: ವಾಹನ ಓಡಿಸುವಾಗ ರಸ್ತೆ ನಿಯಮ ಪಾಲಿಸುವುದರ ಜೊತೆಗೆ ಅಗತ್ಯ ದಾಖಲೆ ಪತ್ರಗಳನ್ನು ಹೊಂದಿರಬೇಕು ಎಂದು ಜೆಎಂಎಫ್‌ಸಿ ಹಿರಿಯ ಶ್ರೇಣಿ ನ್ಯಾಯಾಧೀಶರಾದ ಶಶಿಕಲಾ ಹೇಳಿದರು.

ಕಾನೂನು ಸೇವೆಗಳ ಪ್ರಾಧಿಕಾರದಿಂದ ಆಯೋಜಿಸಿದ್ದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಅಪಘಾತ ಪ್ರಕರಣ ಸಂಬಂಧ ಮಾತನಾಡಿದರು.

ವಾಹನ ಚಾಲನೆ ಮಾಡುವಾಗ ವಾಹನದ ಎಲ್ಲಾ ದಾಖಲಾತಿಗಳು ಮುಖ್ಯವಾಗಿ ಇನ್ಸುರೆನ್ ಇರಬೇಕು. ಅಲ್ಲದೆ ಯಾವುದೇ ವಾಹನ ಕೊಳ್ಳುವಾಗ ಮಾರಾಟ ಮಾಡುವಾಗ ಎಲ್ಲಾ ದಾಖಲಾತಿಗಳು ಸರಿಯಾಗಿರಬೇಕು. ಇಲ್ಲದಿದ್ದರೆ ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಸಮಸ್ಯೆಯಾಗುತ್ತವೆ.

2022ರಲ್ಲಿ ನಡೆದ ಈ ಪ್ರಕರಣದಲ್ಲಿ ಇಬ್ಬರೂ ಸಹ ಸ್ನೇಹಿತರೆ ಜೊತೆಗೆ ಒಟ್ಟಿಗೆ ಕೆಲಸ ಮಾಡುತ್ತಿದ್ದರಿಂದ ಎರಡು ಕಡೆ ವಕೀಲರ ಒಪ್ಪಿಗೆ ಮೇರೆಗೆ ರಾಜಿ ಸಂಧಾನ ಮಾಡಲಾಗಿದೆ. ಅಪಘಾತದಲ್ಲಿ ಪರೋಕ್ಷ್ ಎಂಬುವರು ಮೃತಪಟ್ಟು ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಆರ್ಥಿಕವಾಗಿ ಕುಟುಂಬ ಚಿಂತಾಜನಕ ಸ್ಥಿತಿಯಲ್ಲಿದ್ದು, ಕುಟುಂಬಕ್ಕೆ ನೆರವಾಗುವ ಕೆಲಸವನ್ನು ಎದುರುದಾರರು ಮಾಡಿದ್ದಾರೆ. ವಕೀಲರಾದ ರಾಜೇಶ್ ಹಾಗೂ ಕುಮಾರ್ ಅವರನ್ನು ಒಟ್ಟಿಗೆ ಕೂರಿಸಿ ಪ್ರಕರಣ ಸುಖಾಂತ್ಯ ಮಾಡಲಾಗಿದೆ. 10 ಲಕ್ಷ ರೂ. ವೆಚ್ಚದಲ್ಲಿ ಪರೋಕ್ಷ್ ಕುಟುಂಬಕ್ಕೆ ಪುನೀತ್ ಕುಟುಂಬದವರು ಮನೆ ನಿರ್ಮಾಣ ಮಾಡುವುದರ ಜೊತೆಗೆ ಎರಡು ಮಕ್ಕಳಿಗೂ ತಲಾ 50 ಸಾವಿರ ರೂ. ಎಫ್‌ಡಿ ಮಾಡುವ ಮೂಲಕ ಸಂಧಾನ ಮಾಡಲಾಗಿದೆ ಎಂದರು.

ಲೋಕ ಅದಾಲತ್‌ನಲ್ಲಿ 60 ಪ್ರಕರಣಗಳು ಇತ್ಯರ್ಥಕ್ಕೆ ಬಂದಿದ್ದು 2,200 ಪ್ರಕರಣದಲ್ಲಿ 1,220 ಸಿವಿಲ್, 1,000 ಕ್ರಿಮಿನಲ್ ಪ್ರಕರಣಗಳು ಉಳಿದಿವೆ ಎಂದರು.

ಸರ್ಕಾರಿ ಅಭಿಯೋಜಕಿ ಶಶಿಕಲಾ, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಅದಾಲತ್ ಸಂಧಾನಕಾರ ದಿನಕರ್, ಸಹಕಾರ್ಯದರ್ಶಿ ಶ್ರೀಧರ್, ವಕೀಲರಾದ ಕುಮಾರ್, ರಾಜೇಶ್ ಹಾಜರಿದ್ದರು.

# ರೋಟರಿ ಕ್ಲಬ್‌ನಿಂದ ಮಹಿಳಾ ದಿನಾಚರಣೆ



ಚನ್ನರಾಯಪಟ್ಟಣ: ತಾಲ್ಲೂಕಿನ ರೋಟರಿ ಕ್ಲಬ್ ವಿಷನ್ ವತಿಯಿಂದ ಮಹಿಳಾ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶೆ ಅರುಣಕುಮಾರಿ ಮಾತನಾಡಿ, ಮಹಿಳೆ ಪ್ರಸ್ತುತ ದಿನಗಳಲ್ಲಿ ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. ಅವರಿಗೆ ಕಾನೂನಿನ ನಡೆಯಲ್ಲಿ ಸಾಕಷ್ಟು ಅವಕಾಶಗಳಿರುತ್ತವೆ. ಯಾವ ಮಹಿಳೆಯು ಸಹ ಕಾನೂನಿನಲ್ಲಿರುವ ಅವಕಾಶ ಪಡೆಯದೆ ವಂಚಿತರಾಗಬಾರದು ಎಂದು ತಿಳಿಸಿದರು.

ಡಾ. ಕುಮುದ ಮಾತನಾಡಿ, ಭಾರತದಲ್ಲಿ ಮಹಿಳೆಯರ ಪಾತ್ರ ಸ್ವತಂತ್ರ ಪೂರ್ವದಿಂದಲೂ ಇದೆ. ವೀರ ಮಹಿಳೆಯರು ಸ್ವತಂತ್ರ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದರು. ಅನೇಕ ಮಹಿಳೆಯರು ಬ್ರಿಟೀಷರ ವಿರುದ್ಧ ಹೋರಾಟ ಮಾಡಿದ್ದು ದೇಶದ ಅತ್ಯುನ್ನತ ಸ್ಥಾನಗಳನ್ನು ಮಹಿಳೆಯರು ಅನುಭವಿಸಿರುತ್ತಾರೆ. ಹಾಗಾಗಿ ಮಹಿಳೆಯರೂ ಸಹ ಪುರುಷರಂತೆ ಸಮಾನ ಸಾಧನೆಯನ್ನು ಮಾಡಿರುತ್ತಾರೆ ಎಂದು ತಿಳಿಸಿದರು.

ಅಧ್ಯಕ್ಷತೆಯನ್ನು ರೋಟರಿ ಕ್ಲಬ್‌ನ ಅಧ್ಯಕ್ಷ ಬಿ.ವಿ. ವಿಜಯ್ ವಹಿಸಿದ್ದರು.

ಕಾರ್ಯದರ್ಶಿ ಕುಮುದಾ, ಖಜಾಂಚಿ ನಟರಾಜ್, ಕಿಶೋರ್ ಕುಮಾರ್, ಪರಿಸರ ಎಂಜಿನಿಯರ್ ರಾಜು, ರೆಡ್‌ಕ್ರಾಸ್ ಸಂಸ್ಥೆ ಛೇರ್ಮನ್ ಭರತ್‌ಕುಮಾರ್ ಹಾಜರಿದ್ದರು.

# ಗಾಂಜಾ ಮಾರಾಟ: ಇಬ್ಬರ ಬಂಧನ

ಅರಕಲಗೂಡು: ತಾಲ್ಲೂಕಿನ ಕೊಣನೂರು ಪೊಲೀಸ್ ಠಾಣೆ ವ್ಯಾಪ್ತಿಯ ರಾಮನಾಥ ಪುರ ಐಬಿ ವೃತ್ತದಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಮಾಲು ಸಮೇತ ವಶಕ್ಕೆ ಪಡೆಯಲಾಗಿದೆ.

ಒಡಿಶಾ ಮೂಲದ ಸಮೀರ್ ಪ್ರದಾನ್ ಮತ್ತು ಗೀತಾ ಪ್ರದಾನ್ ಬಂಧಿತರು. ಸೋಮವಾರ ಬೆಳಿಗ್ಗೆ 10ರ ಸಮಯದಲ್ಲಿ ರಾಮನಾಥಪುರ ಪ್ರವಾಸಿ ಮಂದಿರ ವೃತ್ತದಲ್ಲಿ ಬಂಧಿತ ಇಬ್ಬರು ಗಾಂಜಾ ಮಾರಾಟ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದರು. ಹತ್ತು ಕೆ.ಜಿ. ಗಾಂಜಾ ವಶಕ್ಕೆ ಪಡೆಯಲಾಗಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದು ವರಿಸಿದ್ದಾರೆ.



# ಹಾನಗಲ್ ಸರ್ಕಾರಿ ಶಾಲೆಗೆ ಶತಮಾನ ಸಂಭ್ರಮ

ಅರಕಲಗೂಡು: ತಾಲ್ಲೂಕಿನ ಹಾನಗಲ್ ಗ್ರಾಮದ ಸರ್ಕಾರಿ ಶಾಲೆಯ ಶತಮಾನೋತ್ಸವ ಸಂಭ್ರಮ ಅದ್ದೂರಿಯಾಗಿ ನೆರವೇರಿತು.

ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದ, ವರ್ಗಾವಣೆಯಾದ ಶಿಕ್ಷಕರು, ಹಿರಿಯ ವಿದ್ಯಾರ್ಥಿಗಳ ಸಮ್ಮಿಲನ, ದಾನಿಗಳ ಅಭೂತಪೂರ್ವ ಕೊಡುಗೆ, ಊರಿನವರ ಸಹಕಾರ, ಅಕ್ಕಪಕ್ಕದ ಊರಿನವರ ಸಹಕಾರದಿಂದ ಕಾರ್ಯಕ್ರಮ ನೆರವೇರಿತು. ಗ್ರಾಮಸ್ಥರು, ಶಾಲಾ ಶಿಕ್ಷಕರ ಸಹಭಾಗಿತ್ವದಲ್ಲಿ ಮೂಡಿಬಂದ ಶಾಲಾ ಶತಮಾನೋತ್ಸವ ಸಮಾರಂಭ ಇಡೀ ಗ್ರಾಮಕ್ಕೆ ಹಬ್ಬವನ್ನುಂಟು ಮಾಡಿತು.

ಶಾಲಾ ವಿದ್ಯಾರ್ಥಿಗಳಿಂದ ವಿವಿಧ ಬಗೆಯ ಸಾಂಸ್ಕೃತಿ ಕಾರ್ಯಕ್ರಮ ಜರುಗಿತು. ಹಾನಗಲ್ ಗ್ರಾಮ ಸೇರಿದಂತೆ ಅಕ್ಕಪಕ್ಕದ ಗ್ರಾಮಗಳ ನೂರಾರು ಸಂಖ್ಯೆಯ ಜನರು ಭಾಗವಹಿಸಿ ಮಕ್ಕಳ ಪ್ರತಿಭೆಯನ್ನು ಪ್ರೋತ್ಸಾಹಿಸಿದರು.

ವೇದಿಕೆಯಲ್ಲಿ ಚಂದ್ರೇಗೌಡ , ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು, ವೃಂದ ಸಂಘಗಳ ಪದಾಧಿಕಾರಿಗಳು, ಶಿಕ್ಷಣ ಸಂಯೋಜಕರು, ಸಮೂಹ ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು.

ಶಾಲೆಯ ಮುಖ್ಯ ಶಿಕ್ಷಕ ನಾಗೇಗೌಡ, ಸಹ ಶಿಕ್ಷಕ ಕೇಶವ ಮೂರ್ತಿ ಅವರು ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಿದರು. ಸಹ ಶಿಕ್ಷಕರಾದ ಜಗದೀಶಾರಾಧ್ಯ, ರಾಜೇಂದ್ರ, ವಿಜಯಾ ಮತ್ತು ಮಂಜುಳಾ ಇತರರು ಉಪಸ್ಥಿತರಿದ್ದರು.

# ವಿದ್ಯಾಸೌಧ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ

ಹಾಸನ: ನಗರದ ಹೊರ ಹೊಲಯದಲ್ಲಿರುವ ವಿದ್ಯಾಸೌಧ ಪ್ರಥಮ ದರ್ಜೆ ಕಾಲೇಜಿನಲ್ಲಿ 50ನೇ ಅಂತರ ರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಪ್ರಾಂಶುಪಾಲರಾದ ಡಾ. ಎಂ.ಎಚ್ ರಂಗೇಗೌಡ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ಆಧುನಿಕ ದಿನಗಳಲ್ಲಿ ಮಹಿಳೆಯರ ಸಾಧನೆ ಮತ್ತು ಮಹತ್ವದ ಬಗ್ಗೆ ತಿಳಿಸಿದರು.

ಸಹಾಯಕ ಪ್ರಾಧ್ಯಾಪಕರಾದ ಅಕ್ಷತಾ ಕೆ.ಕೆ ಅವರು ಕಾರ್ಯಕ್ರಮ ಕುರಿತು ಮಾತನಾಡಿ, ಸಮಾಜದ ಮತ್ತು ಕುಟುಂಬದ ಕಣ್ಣಾದ ಸ್ತ್ರೀಯ ಅಸ್ತಿತ್ವ ಮತ್ತು ಆಕೆಯ ಸಮಾನ ಹಕ್ಕುಗಳ ಕುರಿತು ಮಾತನಾಡಿದರು.

ಬಿಬಿಎ ವಿದ್ಯಾರ್ಥಿನಿಯ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಚಾಲನೆ ಪಡೆಯಿತು.

ಸಹಾಯಕ ಪ್ರಾಧ್ಯಾಪಕ ಮಧುಸೂದನ್ ಸಿ.ಎಂ., ಸರ್ವರನ್ನು ಸ್ವಾಗತಿಸಿದರು. ಬಿಸಿಎ ವಿದ್ಯಾರ್ಥಿನಿ ಉಜ್ಮಾ ಹನಿ ನಿರೂಪಿಸಿದರು.

# ಆರೋಗ್ಯದ ಅರಿವು ಎಲ್ಲರಿಗೂ ಇರಬೇಕು

ಅರಕಲಗೂಡು: ಆರೋಗ್ಯದ ಅರಿವು ಪ್ರಮುಖವಾಗಿ ಇರಬೇಕು. ಅದರಿಂದ ಎಲ್ಲಾ ಸಮಸ್ಯೆಯನ್ನು ಎದುರಿಸಬಹುದಾಗಿದೆ ಎಂದು ತಹಶೀಲ್ದಾರ್ ಮಲ್ಲಿಕಾರ್ಜುನ್ ತಿಳಿಸಿದರು.

ಸೋಮವಾರ ಆರೋಗ್ಯ ಇಲಾಖೆ ವತಿಯಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಹಮ್ಮಿಕೊಂಡಿದ್ದ ಬೀದಿ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಪೂರ್ವಿಕರು ಆರೋಗ್ಯವನ್ನು ತಮ್ಮ ಕೈಯಲ್ಲಿಯೇ ಇಟ್ಟುಕೊಂಡಿದ್ದರು. ಇವತ್ತಿನ ಆಹಾರ ಪದ್ಧತಿಯಿಂದ ಕೆಲವು ರೋಗ ರುಜಿನಗಳು ಉಲ್ಬಣಗೊಳ್ಳುತ್ತಿವೆ. ಈ ನಿಟ್ಟಿನಲ್ಲಿ ಆಹಾರ ಸೇವನೆ ಬಗ್ಗೆಯೂ ಕೂಡ ಹೆಚ್ಚು ಅರಿವು ಇರಬೇಕಾಗುತ್ತದೆ ಎಂದು ಹೇಳಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ಮಾತನಾಡಿ, ಹೊಯ್ಸಳ ಜಾನಪದ ಕಲಾವಿದರ ತಂಡದ ಕಲಾವಿದರು ಜಾನಪದ ಕಲೆ ಮೂಲಕ ಜನ ಸಾಮಾನ್ಯರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ 8 ದಿನಗಳ ಕಾಲ ನಡೆಯಲಿದೆ. ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸಾರ್ವಜನಿಕರು ಹೆಚ್ಚು ಸೇರುವ ಸ್ಥಳಗಳಲ್ಲಿ ಜಾನಪದ ಕಲಾ ತಂಡ ಆರೋಗ್ಯದ ಅರಿವು ಮೂಡಿಸುವ ಕಲೆಯನ್ನು ಪ್ರದರ್ಶಿಸಿ ಜಾಗೃತಿ ಮೂಡಿಸುತ್ತಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಆರೋಗ್ಯದ ಬಗ್ಗೆ ಅರಿವು ಹೊಂದಬೇಕೆಂದು ಅವರು ಮನವಿ ಮಾಡಿದರು.

ಕಲಾ ತಂಡದ ಮುಖಂಡ ಬಿ.ಟಿ. ಮಾನವ ಮತ್ತು ಕಲಾವಿದರು ಜಾನಪದ ಹಾಡುಗಳ ಮೂಲಕ ಆರೋಗ್ಯದ ಬಗ್ಗೆ ಅರಿವು ಮೂಡಿಸಿದರು. ಆರೋಗ್ಯ ಇಲಾಖೆ ಅಧಿಕಾರಿ ಪರಮೇಶ್, ಚಂದ್ರೇಗೌಡ, ಕಂದಾಯ ಅಧಿಕಾರಿಗಳಾದ ಹರೀಶ್, ಸೋಮಶೇಖರ್, ಮುಖಂಡ ಗಣೇಶ್ ವೇಲಾಪುರಿ ಇತರರು ಇದ್ದರು.



# ಭಾರತೀಯ ನಾರಿ ವಿಶ್ವಕ್ಕೆ ಮಾದರಿ: ಮಲ್ಲಿಗಮ್ಮ



ಆಲೂರು: ಮಹಿಳೆ ದೀಪದಂತೆ ತಾನುರಿದು ತನ್ನ ಸುತ್ತಲಿನವರನ್ನು ಬೆಳಗಿಸುತ್ತಾಳೆ ಎಂದು ಕಣತೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಮಲ್ಲಿಗಮ್ಮ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಕಾಲೇಜಿಯಲ್ಲಿ ಆಲೂರಿನ ಐ.ಕ್ಯೂ.ಎ.ಸಿ., ಸಮಾಜಶಾಸ್ತ್ರ ಮತ್ತು ರಾಜ್ಯಶಾಸ್ತ್ರ ವಿಭಾಗಗಳ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಭಾರತೀಯ ನಾರಿ ವಿಶ್ವಕ್ಕೆ ಮಾದರಿ. ಉದ್ಯೋಗಂ ಪುರುಷ ಲಕ್ಷಣಂ ಮಾತ್ರವಲ್ಲ ಅದು ಸ್ತ್ರೀ-ಪುರುಷ ಲಕ್ಷಣಂ. ಮನೆಯ ಆಗು-ಹೋಗುಗಳನ್ನು ಹಾಗೂ ದೇಶದ ಆಗು-ಹೋಗುಗಳನ್ನು ನಿರ್ವಹಿಸುವ ಶಕ್ತಿಯನ್ನು ಮಹಿಳೆ ಹೊಂದಿದ್ದಾಳೆ. ಕುಟುಂಬ, ಸಮಾಜ ಮತ್ತು ದೇಶದ ಸ್ವಾಸ್ಥ್ಯವನ್ನು ಕಾಪಾಡುವ ಸಾಮರ್ಥ್ಯ ಮಹಿಳೆಯರಿಗಿದೆ ಎಂದರು.

ಪ್ರಾಂಶುಪಾಲ ಟಿ.ಪಿ. ಪುಟ್ಟರಾಜು ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಿಳೆ ಅಬಲೆಯಲ್ಲ. ಆಕೆ ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡಿದ್ದಾಳೆ. ಮಹಿಳೆ ಪುರುಷರಿಗಿಂತಲೂ ಹೆಚ್ಚು ಸಮರ್ಥವಾಗಿ ಕುಟುಂಬವನ್ನು ನಿರ್ವಹಿಸುತ್ತಿದ್ದಾಳೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಕೆ.ಎಸ್. ರಮೇಶ್, ಎನ್. ಮಾರುತಿ, ಹೆಚ್.ಸಿ. ವೆಂಕಟೇಶ್, ಆರ್.ವಿ. ಮನು, ವಿನುತಾ ಇತರರಿದ್ದರು.

# ಸಕಲೇಶಪುರ: ರಂಜಾನ್ ಇಫ್ತಾರ್ ಕಿಟ್ ವಿತರಣೆ

ಸಕಲೇಶಪುರ: ಪವಿತ್ರ ರಂಜಾನ್ ಮಾಸದ ಪ್ರಯುಕ್ತ ವಿಖಾಯ ವಿಜೀಲೆಂಟ್ ಎಸ್.ಕೆ.ಎಸ್.ಎಸ್. ಎಫ್ ಕಾರ್ಯಕರ್ತರು ಹೆದ್ದಾರಿಯಲ್ಲಿ ಸಂಚರಿಸುತ್ತಿರುವ ಮುಸ್ಲಿಂರಿಗೆ ಸುಗಮವಾಗಿ ಉಪವಾಸ ಮುಗಿಸಬಹುದು ಎಂಬ ಉದ್ದೇಶದಿಂದ ಇಫ್ತಾರ್ ಕಿಟ್ ವಿತರಣೆ ಮಾಡುತ್ತಿದ್ದೇವೆ ಎಂದು ವಿಖಾಯದ ಕಾರ್ಯಕರ್ತ ಸಮದ್ ಫೈಝಿ ಹೇಳಿದರು.

ಪಟ್ಟಣದ ಹೊರ ವರ್ತುಲ ರಸ್ತೆ ಕೆಂಪೇಗೌಡ ಪ್ರತಿಮೆ ಸಮೀಪ ಕಿಟ್‌ಗಳನ್ನು ವಿತರಿಸಿ ಮಾತನಾಡಿ, ಈ ಮಾನವೀಯ ಸೇವಾ ಕಾರ್ಯ ಕಳೆದ ಹತ್ತು ದಿನಗಳಿಂದ ನಿರಂತರವಾಗಿ ನಡೆಯುತ್ತಿದ್ದು, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹಮ್ಮಿಕೊಳ್ಳಲಾಗಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಉಪವಾಸ ಮುಗಿಸಲು ತೊಂದರೆ ಆಗಬಾರದೆಂಬ ಕಾರಣಕ್ಕೆ ಈ ಸೇವೆಯನ್ನು ಪ್ರಾರಂಭಿಸಿದ್ದೇವೆ. ನಮಗೆ ಸೇವಾ ಧರ್ಮವೇ ಮುಖ್ಯ. ಎಸ್.ಕೆ.ಎಸ್.ಎಸ್.ಎಫ್.ನ ಮೂಲ ಧ್ಯೇಯ. ಪ್ರತಿದಿನ ಸುಮಾರು 50 ರಿಂದ 100 ಪ್ರಯಾಣಿಕರಿಗೆ ಇಫ್ತಾರ್ ಕಿಟ್ ವಿತರಣೆ ಮಾಡಲಾಗುತ್ತಿದೆ. ಅದರಿಂದ ಅವರ ಉಪವಾಸ ಮುಕ್ತಾಯ ಸುಗಮಗೊಳ್ಳುವಂತೆ ಸಹಾಯ ಮಾಡುತ್ತಿರುವುದಕ್ಕೆ ನಾವು ಹರ್ಷಿತರಾಗಿದ್ದೇವೆ ಎಂದು ತಿಳಿಸಿದರು.

ಗುಳಗಳಲೆ ಜಾಮಿಯ ಮಸೀದಿಯ ಅಧ್ಯಕ್ಷ ಕಾಸಿಂ ಗುಳಗಳಲೆ, ನಿಸಾರ್ ಸುಂಡೆಕೆರೆ, ಬದುರುದ್ದೀನ್ ಧಾರಿಮಿ, ಸುಲೇಮಾನ್ ಆನಿಮಹಲ್, ಉಮರ್ ಉಸ್ತಾದ್ ಸೇರಿದಂತೆ ಇನ್ನಿತರರು ಇದ್ದರು.



# ರಾಯಲ್ ಉತ್ಸವ್ ಸಾಂಸ್ಕೃತಿಕ ದಿನಾಚರಣೆ



ಅರಸೀಕೆರೆ: ನಗರದ ರಾಯಲ್ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಕಾಲೇಜು ವತಿಯಿಂದ ವಿದ್ಯಾರ್ಥಿಗಳು ರಾಯಲ್ ಉತ್ಸವ್ ಎಂಬ ಶೀರ್ಷಿಕೆಯೊಂದಿಗೆ ಸಾಂಸ್ಕೃತಿಕ ದಿನವನ್ನು ಶನಿವಾರ ವೆಂಕಟೇಶ್ವರ ಕಲಾ ಭವನದಲ್ಲಿ ಸಂಭ್ರಮದಿಂದ ವಿಶಿಷ್ಟಪೂರ್ಣವಾಗಿ ಆಚರಿಸಿದರು.

ಈ ವೇಳೆ ನಗರಸಭಾ ಸದಸ್ಯ ಹಾಗೂ ರೋಟರಿ ಕ್ಲಬ್ ಅಧ್ಯಕ್ಷ ದರ್ಶನ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಈ ಆಧುನಿಕ ಯುಗದಲ್ಲಿ ಭಾರತೀಯ ಸಂಸ್ಕೃತಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಾಲೇಜುಗಳಲ್ಲಿ ಸಾಂಪ್ರದಾಯಕ ಹಬ್ಬಗಳ ಆಚರಣೆ ಮಹತ್ವಪೂರ್ಣವಾಗಿದೆ. ವಿದ್ಯಾರ್ಥಿಗಳು ಸತತ ಅಧ್ಯಯನದಿಂದ ಉನ್ನತ ಸ್ಥಾನ ಹೊಂದುವುದರ ಜೊತೆಗೆ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು. ಪೋಷಕರ ಶ್ರಮವನ್ನು ಅರ್ಥಮಾಡಿಕೊಂಡು ವಿದ್ಯಾರ್ಥಿ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಕೆ.ಎಸ್. ಮಂಜುನಾಥ್ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲಿ ಅಸಾಧರಣ ಪ್ರತಿಭೆ ಹಾಗೂ ಶಕ್ತಿಯನ್ನು ಆ ಭಗವಂತ ಕೊಟ್ಟಿರುತ್ತಾನೆ. ಅಂತಹ ಅವಕಾಶವನ್ನು ವಿದ್ಯಾರ್ಥಿ ವಯಸ್ಸಿನಲ್ಲಿ ಬಳಸಿಕೊಂಡು ಹೆತ್ತವರಿಗೆ ಸಮಾಜಕ್ಕೆ ಮಾದರಿಯಾಗಬೇಕು. ಸ್ಪರ್ಧಾತ್ಮಕ ಜಗತ್ತಿನಲ್ಲಿ ಜ್ಞಾನವಿದ್ದರೆ ಏನನ್ನಾದರೂ ಸಾಧಿಸಬಹುದು. ಅದಕ್ಕೆ ಕಠಿಣ ಪರಿಶ್ರಮ ಅಗತ್ಯವಾಗಿದೆ ಎಂದು ಹೇಳಿದರು.

ಕಾರ್ಯದರ್ಶಿ ಉಷಾ ಬೋಪಯ್ಯ ಮಾತನಾಡಿ, ವಿದ್ಯಾರ್ಥಿ ಜೀವನ ಸುಂದರವಾಗಿದ್ದು, ಭವಿಷ್ಯದ ಗುರಿಯನ್ನು ಮುಟ್ಟುವುದರಲ್ಲಿ ಸದಾ ಯೋಚನೆ ಇರಬೇಕು. ಭಾರತೀಯ ಸಂಸ್ಕೃತಿ, ಪರಂಪರೆ ಶ್ರೇಷ್ಟವಾಗಿದೆ. ಮನುಷ್ಯನ ಜೀವನದಲ್ಲಿ ಶಾಂತಿ, ನೆಮ್ಮದಿ ಹಾಗೂ ಸಹಬಾಳ್ವೆ ಜೀವನ ನಡೆಸಲು ಸಂಸ್ಕೃತಿ ಉಳಿಸುವ ಬೆಳೆಸುವ ಇಂತಹ ಕಾರ್ಯಕ್ರಮ ಅರ್ಥಪೂರ್ಣವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು , ಸಿಬ್ಬಂದಿ ವರ್ಗದವರು ಸಂಪ್ರದಾಯಿಕ ಉಡುಗೆ ತೊಟ್ಟು ಆಗಮಿಸಿದ್ದು ವಿಶೇಷವಾಗಿತ್ತು.

ಶಕುಂತಲಾ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಜಾವಗಲ್ ಎಂ.ಸಿ.ಕುಮಾರ್, ಕೋಡಿಮಠ ಪಿ.ಯು.ಕಾಲೇಜು ಉಪನ್ಯಾಸಕ ಬಿ.ಡಿ.ಕುಮಾರ್, ಉಪನ್ಯಾಸಕರಾದ ಕೆ.ಸಿ. ನಟರಾಜ್, ಪ್ರಶಾಂತ್, ಕೆ.ಎನ್.ಹೇಮಾ, ಅಮೃತ, ದೀಪಿಕಾ, ಮಾಲತೇಶ್, ರಕ್ಷಿತ, ಸಚ್ಚಿನ್, ವಿದ್ಯಾರ್ಥಿ ಸಂಘದ ಅಧ್ಯಕ್ಷ ಸುದೀಪ್, ಉಪಾಧ್ಯಕ್ಷ ದೀಪಕ್ ಯಾದವ್, ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕಟ್ಟಡ ಕುಸಿದು ಇಬ್ಬರ ಸಾವು: ಪುರಸಭೆ ಸಾಂತ್ವನ



ಬೇಲೂರು: ಶಿಥಿಲ ಮಳಿಗೆ ಛಾವಣಿ ಕುಸಿದು ಇಬ್ಬರು ಮೃತಪಟ್ಟ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್ ಅವರು ತಲಾ 50 ಸಾವಿರ ರೂ. ಪರಿಹಾರ ವಿತರಿಸಿದರು.

ಈ ವೇಳೆ ಮಾತನಾಡಿದ ಅವರು, ಭಾನುವಾರ ವಾಣಿಜ್ಯ ಮಳಿಗೆ ಛಾವಣಿ ಕುಸಿದ ಪರಿಣಾಮ ನಜೀರ್ ಹಾಗೂ ಅಮರನಾಥ್ ಮೃತಪಟ್ಟಿದ್ದಾರೆ. ನಾವು ಏನೇ ಪರಿಹಾರ ನೀಡಿದರೂ ಆ ಕುಟುಂಬದವರಿಗೆ ನೆರವಾಗಲು ಸಾಧ್ಯವಿಲ್ಲ. ಪುರಸಭೆ ವ್ಯಾಪ್ತಿಯಲ್ಲಿದ್ದ ಖಾಸಗಿಯವರ ಕಟ್ಟಡದ ಛಾವಣಿ ಬಿದ್ದು ಇಬ್ಬರು ಸಾವನ್ನಪ್ಪಿದ್ದಾರೆ. ರಸ್ತೆಬದಿಯಲ್ಲಿ ಯಾವುದೇ ವ್ಯಾಪಾರ ವಹಿವಾಟು ಹಾಗೂ ಫುಟ್ ಪಾತ್ ನಲ್ಲಿ ವ್ಯಾಪಾರ ಮಾಡಲು ಅವಕಾಶ ನೀಡುವುದಿಲ್ಲ. ಪಟ್ಟಣದ ಕೆಲವು ಭಾಗಗಳಲ್ಲಿ ಹಳೆ ಕಟ್ಟಡಗಳು ಎಷ್ಟಿದೆ ಎಷ್ಟು ಶಿಥಿಲಗೊಂಡಿದೆ ಎಂಬುದನ್ನು ಸರ್ವೆ ನಡೆಸಿ ಸಂಬಂಧಪಟ್ಟವರಿಗೆ ನೋಟಿಸ್ ಜಾರಿ ಮಾಡಲಾಗುವುದು ಎಂದರು.

ಪುರಸಭೆ ಸದಸ್ಯ ಜಗದೀಶ್, ಅಶೋಕ್, ಜಮಾಲ್ ಹಾಗೂ ಮುಖ್ಯಾಧಿಕಾರಿ ಸುಜಯ್ ಕುಮಾರ್ ಹಾಜರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248